

ಮುಂಬಯಿ ಮತ್ತು ಸೂರತ್‌ಗಳಲ್ಲಿ ಕಚ್ಚಾ ವಜ್ರದ ಉತ್ಪಾದನೆ ಅತ್ಯಂತ ಹೆಚ್ಚು. ಜಗತ್ತಿನ ಶೇ.90ರಷ್ಟು ಈ ಎರಡು ನಗರಗಳಲ್ಲಿ ಸಿಗುತ್ತದೆ. ವಜ್ರದ ಕಟಿಂಗ್ ಮತ್ತು ಪಾಲಿಶಿಂಗ್‌ನಲ್ಲಿ ಸೂರತ್ ಮುಂದಿದೆ. ಅಲ್ಲದೆ ಮುಂಬಯಿಯನ್ನು ಹೊರತುಪಡಿಸಿದರೆ ಸೂರತ್ ಭಾರತದ ಎರಡನೆ ದೊಡ್ಡ 'ಡೈಮಂಡ್ ಟ್ರೇಡಿಂಗ್ ಹಬ್' ಆಗಿದೆ.



ಚಿನ್ನದ ಒಡವೆ ಜತೆಗೆ ವಜ್ರವನ್ನು ಸುಲಭವಾಗಿ ಜೋಡಿಸಿ ಆಕರ್ಷಕವಾಗಿ ವಿನ್ಯಾಸ ಮಾಡುವ ಕಾರಣ ಹಾಗೂ ಇತ್ತೀಚೆಗೆ ಮಹಿಳೆಯರು ಹಗುರವಾದ 'ಸಿಂಗಲ್ ಪೀಸ್ ಆರ್ನಮೆಂಟ್' ಮೇಲೇ ಹೆಚ್ಚಿನ ಒಲವು ತೋರಿಸುತ್ತಿರುವುದರಿಂದ ವಜ್ರದ ಒಡವೆ ಶ್ರೀಮಂತರ ಸೊತ್ತಾಗಿ ಮಾತ್ರ ಉಳಿದಿಲ್ಲ.

ವಜ್ರದ ಆಭರಣವನ್ನು ವಿಶ್ವದಾದ್ಯಂತ ಮಹಿಳೆಯರು ಮೆಚ್ಚುಗೆಯಿಂದ ಧರಿಸುತ್ತಿದ್ದು, ಇದಕ್ಕಾಗಿ ಫಾರೆವರ್ ಮಾರ್ಕ್ ಬ್ರ್ಯಾಂಡ್ 'ಗ್ಲೋಬಲ್ ಡಿಸೈನ್' ಅನ್ನು ರೂಪಿಸಿಕೊಂಡಿದೆ. ಇದರಂತೆ ವಜ್ರದಲ್ಲಿ 'ಮೆಲಿಮೊವ' ಎಂಬ ಡಿಸೈನ್ ತಯಾರು ಮಾಡಿ ಇದರಲ್ಲಿ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವದ ಪ್ರತಿಬಿಂಬ ಎಂಬಂತೆ ಆಭರಣ ತಯಾರಿಸಲಾಗಿದೆ. ಮಹಿಳೆಯರ ಭಾವನೆ, ಹಣ ಹೂಡಿಕೆ, ಆಭರಣಗಳನ್ನು ಕೊಂಡು ತಮ್ಮದಾಗಿಸುವ ತವಕ, ಇವೆಲ್ಲದರ ಜತೆಗೆ ಫ್ಯಾಷನೆಬಲ್ ಆಗಿ ಕಾಣಬೇಕೆಂಬ ತುಡಿತ.. ಈ ಎಲ್ಲ ಇಂಗಿತವನ್ನು ಮಡಿಲಲ್ಲಿಟ್ಟುಕೊಂಡು ವಜ್ರದಲ್ಲಿ ವೈವಿಧ್ಯಮಯ ಮತ್ತು ವಿಭಿನ್ನ ವಿನ್ಯಾಸಗಳನ್ನು ನೀಡಲು ವಜ್ರಾಭರಣ ಮಳಿಗೆಗಳು ಪ್ರಯತ್ನಿಸುತ್ತಿವೆ.

ವಜ್ರಾಭರಣದಲ್ಲಿ ಈಗ ನವಿಲಿನ ವಿನ್ಯಾಸ, ಸೆವೆನ್ ಸ್ಟೋನ್ ಡಿಸೈನ್ ಮುಂತಾದವು ಹೊಸ ಟ್ರೆಂಡ್. ಮದುವೆ ಸಂದರ್ಭಕ್ಕಾಗಿ ಮಲ್ಟಿಪರ್ಪಸ್ ಜ್ಯುವೆಲ್ಲರಿಗಳೂ ಲಭ್ಯ. ವಧುವಿಗಾಗಿಯೇ ವಿಶೇಷವಾಗಿ ರೂಪಿಸಿದ ವಜ್ರಾಭರಣಗಳು ಇಂದಿನ ಟ್ರೆಂಡ್‌ಗೆ ತಕ್ಕಂತೆ ಹಲವು ವಿನ್ಯಾಸಗಳಲ್ಲಿ ಲಭ್ಯ. ಸ್ಪಾರ್ಕ್ಲಿಂಗ್ ಡೈಮಂಡ್, ಸ್ಟೇಟ್‌ಮೆಂಟ್ ಪೀಸ್ ಮುಂತಾದವು ಮದುಮಗಳ ಅಲಂಕಾರಕ್ಕಾಗಿಯೇ ರೂಪಿಸಿದಂಥವು.

ನಕ್ಷತ್ರದ ವಿನ್ಯಾಸ ಅತ್ಯಂತ ಹಳೆಯ ವಿನ್ಯಾಸ ಮಾದರಿ. ಸೆವೆನ್ ಸ್ಟೋನ್ ಕಾನ್ಸೆಪ್ಟ್ ಆಗಿರುವ ಈ ಒಡವೆ 1938ರಿಂದಲೇ ಚಾಲ್ತಿಯಲ್ಲಿತ್ತು. ಈಗಲೂ ಅದೇ ಬೇಡಿಕೆ, ಜನಪ್ರಿಯತೆ ಉಳಿಸಿಕೊಂಡಿದೆ. ಸಿಂಗಲ್ ಎಡಿಷನ್, ಸಿಗ್ನೇಚರ್ ಡಿಸೈನ್ ಮಹಿಳೆಯರ ಮನ ತಣಿಸುತ್ತಿದೆ. ಸಮಕಾಲೀನ ವಿನ್ಯಾಸದ ಟ್ರೆಂಡಿ ಆಭರಣವನ್ನು ಸಣ್ಣವಯಸ್ಸಿನ ಹುಡುಗಿಯರು ಖರೀದಿಸಿದರೆ, ಸಾಂಪ್ರದಾಯಿಕ